# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Apraava Energy Private Limited ಕಂಪನಿಗೆ ವಿಜಯಪುರ ಜಿಲ್ಲೆಯ ತಾಳಿಕೋಟೆ ಮತ್ತು ದೇವರಹಿಪ್ಪರಗಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 300.3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/08/ AEPL-300.3 MW/Talikot & Devarahipparagi/Vijayapura/ F-5(2023)/0210, ದಿನಾಂಕ:19.01.2023.

2) ದಿನಾಂಕ:21.01.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Apraava Energy Private Limited ಕಂಪನಿಗೆ ವಿಜಯಪುರ ಜಿಲ್ಲೆಯ ತಾಳಿಕೋಟೆ ಮತ್ತು ದೇವರಹಿಪ್ಪರಗಿ ತಾಲ್ಲೂಕುಗಳ ಅಲಗೂರ, ರಾಂಪುರ, ತುರ್ಕನ್ಗೇರಿ, ಬೂದಿಹಾಲ್, ಕಲಕೇರಿ, ಬಿಬಿ ಇಂಗಲಗಿ, ವಂಕಿಹಾಲ್, ಬೇಕಿನಾಲ, ಬನ್ನಿಹಟ್ಟಿ, ಅಸ್ಕಿ, ನೀರಲಗಿ, ಬಿಂಜಲಭಾವಿ, ಜಲಪುರ, ತುಂಬಗಿ, ಭಂಟನೂರ, ಹೊಸಹಳ್ಳಿ, ಗೋಟಖಂಡಕಿ, ಹೂವಿನ್ಹಾಲ, ಫತೇಪುರ್ ಪಿಟಿ, ಗಡಿ ಸೋಮನಾಲ್, ಕರಗನೂರ ಮತ್ತು ಬೊಮ್ಮನಹಳ್ಳಿ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ 300.3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ ಮೂರನೇ ವ್ಯಕ್ತಿಗೆ Inter State Transmission System ಮುಖಾಂತರ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s Apraava Energy Private Limited ಕಂಪನಿಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು ಕೋರಿರುವ ಸ್ಥಳವು M/s MU Wind Power Private Limited ಕಂಪನಿಗೆ ದಿನಾಂಕ:04.04.2022 ರಂದು ತಾತ್ವಿಕ ಅನುಮೋದನೆ ನೀಡಿರುವ 18 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 1.5 ಮೆ.ವ್ಯಾ ಸಾಮರ್ಥ್ಯದ ಒಟ್ಟು 12 ವಿಂಡ್ ಟರ್ಬೈನ್ ಗಳನ್ನು ಅಳವಡಿಸುತ್ತಿದ್ದು, ಅದರಲ್ಲಿ 5 ವಿಂಡ್ ಟರ್ಬೈನ್ ಗಳು ಮಾತ್ರ M/s Apraava Energy Private Limited ಕಂಪನಿಯು ಕೋರಿರುವ ಹಂಚಿಕೆ ಪ್ರದೇಶದಲ್ಲಿ ಬರುತ್ತಿರುವುದರಿಂದ, M/s MU Wind Power Private Limited ಅಳವಡಿಸುವ ವಿಂಡ್ ಟರ್ಬೈನ್ ಗಳಿಗೆ ಯಾವುದೇ ತೊಂದರೆಯಾಗದಂತೆ ಷರತ್ತು ವಿಧಿಸಿ ಹಾಗೂ MNRE ಮಾರ್ಗಸೂಚಿಯಂತೆ M/s Apraava Energy Private Limited ಕಂಪನಿಗೆ 300.3 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಹಂಚಿಕೆ ಆದೇಶ ನೀಡಬಹುದಾಗಿರುತ್ತದೆ. ಆದುದರಿಂದ, M/s Apraava Energy Private Limited ಹಂಚಿಕೆಗಾಗಿ ಕೋರಿರುವ ಸ್ಥಳವು ಲಭ್ಯವಿರುತ್ತದೆ.

M/s Apraava Energy Private Limited ಕಂಪನಿಯು 300.3 ಮೆ.ವ್ಯಾ. ಸಾಮರ್ಥ್ಯಕ್ಕೆ 2.1 ಮೆ.ವ್ಯಾ. ಸಾಮರ್ಥ್ಯದ 143 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 572 ಎಕರೆ (143 Nos of WTG x 4 Acres = 572 Acres) ಜಮೀನನ್ನು ಮಾತ್ರ ಟೋಪೋಶೀಟ್ ಸಂಖ್ಯೆ:56 D/6 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ.

M/s Apraava Energy Private Limited ಕಂಪನಿಯು ದಿನಾಂಕ:29.09.2021 ರಂದು ನೊಂದಾವಣೆಗೊಂಡಿದ್ದು, ಇದರ ನೊಂದಾಯಿತ ಕಚೇರಿಯು ಗುಜರಾತಿನ ಅಹಮದ್‌ಬಾದ್‌ನಲ್ಲಿ ಸ್ಥಾಪಿತಗೊಂಡಿದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.03.2022ರ ಅಂತ್ಯಕ್ಕೆ ರೂ.5,962.81 ಕೋಟಿಗಳಾಗಿರುತ್ತದೆ ಕೆ.ಆರ್.ಇ.ಡಿ.ಎಲ್.ನಿಯಮಿತವು ತಿಳಿಸಿರುತ್ತದೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Apraava Energy Private Limited ಕಂಪನಿಯು ವಿಜಯಪುರ ಜಿಲ್ಲೆಯ, ತಾಳಿಕೋಟ್ ಮತ್ತು ದೇವರಹಿಪ್ಪರಗಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 300.3 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು 2.1 ಮೆ.ವ್ಯಾ ಸಾಮರ್ಥ್ಯದ 143 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಅಳವಡಿಸುವ Wind Turbine ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಅಭಿವೃದ್ಧಿದಾರರು ಅಳವಡಿಸುವ ಪ್ರತಿ ಟರ್ಬೈನ್ ನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 572 ಎಕರೆ (143 Nos of WTG x 4 Acres = 572 Acres) ಜಮೀನನ್ನು ಮಾತ್ರ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಟೋಪೋಶೀಟ್ ಸಂಖ್ಯೆ: 56D/6 ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ ಸದರಿಯವರು ಅಳವಡಿಸುವ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ ಮಾರ್ಗಸೂಚಿಯಂತೆ (Micrositing Guidelines) ಅಳವಡಿಸಬೇಕಾಗಿರುತ್ತದೆ. ಆದ ಕಾರಣ ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ಅನುಮತಿ ಪತ್ರ ಹಾಗೂ LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ.

ನಿರ್ದೇಶಕರು (ತಾಂತ್ರಿಕ), ಕೆಪಿಟಿಸಿಎಲ್ ಇವರು ಸದರಿ ಯೋಜನೆಗೆ evacuation Proposed 765/400 kV Kudagi PGCIL ಸಬ್‌ಸ್ಟೇಷನ್ at Vijayapura ನೀಡಲು KPTCL ನಿಯಮಿತದಿಂದ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಕೆಳಕಂಡ ಷರತ್ತುಗಳಿಗೊಳಪಟ್ಟು M/s Apraava Energy Private Limited ಕಂಪನಿಗೆ ವಿಜಯಪುರ ಜಿಲ್ಲೆಯ ತಾಳಿಕೋಟೆ ಮತ್ತು ದೇವರಹಿಪ್ಪರಗಿ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ 300.3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

i. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡಲು

ii. ಈಗಾಗಲೇ ಇತರೆ ಅಭಿವೃದ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯ WTG Co-ordinates Overlap ಆಗಿದ್ದಲ್ಲಿ, ಅಂತಹ WTGs ಸಾಮರ್ಥ್ಯವು ರದ್ದುಗೊಳ್ಳುತ್ತದೆ.

iii. ಅಭಿವೃದ್ಧಿದಾರರು ಸದರಿ ಯೋಜನೆಯನ್ನು RE Policy 2022-27 ರ ಪ್ರಕಾರ ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 2 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಬೇಕಾಗುತ್ತದೆ.

iv. ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 45 ದಿನಗಳೊಳಗೆ ಪ್ರತೀ ಮೆ.ವ್ಯಾ ಗೆ ರೂ.5 ಲಕ್ಷದಂತೆ ನೆರವೇರಿಕೆ ಬ್ಯಾಂಕ್ ಖಾತರಿಯನು, ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ